58

## ಬೆಂಗಳೂರು ಡಿಸ್ಟ್ರಿಕ್ಟ್.

### ಫಾರೆಸ್ಟ್ ಇಲಾಖಾ.

### ಇಸ್ತಿಹಾರ್.

ತಾರೀಖು 1ನೇ ಜನವರಿ 1896.

ಸ್ಯ 1890ನೇ ಫೆಬ್ರವರಿ 1ನೇ ತಾರೀಖಿನ ಮೈಸೂರ್ ಗೆಜೆಟ್ 2ನೇ ಪಾರ್ಟ್ 26ನೇ ಪುಟದಲ್ಲಿ ಪ್ರಾಯಿವ್ಡ್ ಆಗಿರುವ ಇನ್ಸ್ಪೆಕ್ಟರ್ ಜನರಲ್ ಸಾಹೆಬರವರ 22–1—90ನೇ ನೋಟಿಫಿಕೇಷ್ಟ ಅನುಸರಿಸಿ ಯಲ್ಲರಿಗೂ ತಿಳಿಸುವದೇನಂದರೆ, ಈ ಕೆಳಗೆ ಕಂಡ ಬೆಂಗಳೂರು ಡಿಸ್ಟ್ರಿಕ್ಟು ಸ್ಟೇಟ್ ಫಾರೆಸ್ಟ್ಗಳು ಮತ್ತು ಪ್ಲಾಂಟೇಷ್ಟಗಳು ಬೇಸಿಗೆ ಕಾಲಕ್ಕೋಸ್ಕರ ಸ್ಯ 1896ನೇ ಫೆಬ್ರವರಿ ಗುರ್ತೀ ತಾರೀಖು ಲಾಗಾಯತು ಮೇ 31ನೇ ತಾರೀಖು ವರಿಗೂ ಬಂದ್ ಮಾಡಲ್ಪಟ್ಟು ಯಿವೆ, ಇವುಗಳಲ್ಲಿ ಷಿಕಾರಿ ವಗೈರೆ ಬಗ್ಯೆ ಪ್ರವೇಸಿಸಕೂಡದು. ಅತಿಕ್ರಮ ಪ್ರವೇಶ ಮಾಡಿದವರನ್ನ ಪ್ರಾಸಿಕ್ಯೂಷ್ಟ ಮಾಡುತ್ತೆ.

| | ಸ್ಟೇಟ್ ಫಾರೆಸ್ಟ್ ಮತ್ತು ಪ್ಲಾಂಟೇಷ್ಟ. | ತಾಲ್ಲೂಕು. |
|---|---|---|
| 1 | ರಾಗಿಹಳ್ಳಿ ಸ್ಟೇಟ್ ಫಾರೆಸ್ಟ್ | ಆನೇಕಲ್ |
| 2 | ಬಿಳಿಕಲ್ಲು ಡಿಟೋ | ಕಾನಕಾನಹಳ್ಳಿ |
| 3 | ಚಿಲ್ಲಂದಾಜಿ ಮತ್ತು ಮುಗ್ಗೂರು ಡಿಟೋ | ಡಿಟೋ |
| 4 | ಕಬ್ಬಾಳು ಡಿಟೋ | ಡಿಟೋ |
| 5 | ಬಸವನಬೆಟ್ಟ ಡಿಟೋ | ಡಿಟೋ ಮತ್ತು ಮಳವಳ್ಳಿ |
| 6 | ತೆಂಗಿನಕಲ್ಲು ಮತ್ತು ಬಾಣಂತಿವೊರಿ ಡಿಟೋ | ಕಾನಕಾನಹಳ್ಳಿ ಮತ್ತು ಕ್ಯೋಸಪೇಟೆ |
| 7 | ಮುದಿಗೆರೆ ಪ್ಲಾಂಟೇಷ್ಟ | ಚನ್ನಪಟ್ಟಣ |
| 8 | ಯಂಗೈಯನಕೆರೆ ಪ್ಲಾಂಟೇಷ್ಟ | ಡಿಟೋ |
| 9 | ಮಾಕಳಿ ಸ್ಟೇಟ್ ಫಾರೆಸ್ಟ್ | ಕ್ಯೋಸಪೇಟೆ |
| 10 | ಚಿಕ್ಕ ಮಂಣು ಗುಡ್ಡೆ | ಡಿಟೋ, |
| 11 | ದೊಡ್ಡ ಮಂಣು ಗುಡ್ಡೆ | ಡಿಟೋ |
| 12 | ಹಂದಿಗೊಂದಿ ಮತ್ತು ಹುಲ್ಲುರ್ ಸ್ಟೇಟ್ ಫಾರೆಸ್ಟ್ | ಡಿಟೋ |
| 13 | ಕಲ್ಲುಗೋಪನಹಳ್ಳಿ ಪ್ಲಾಂಟೇಷ್ಟ | ಡಿಟೋ |
| 14 | ಅಚ್ಚೆಲ್ ಸ್ಟೇಟ್ ಫಾರೆಸ್ಟ್ | ಡಿಟೋ |
| 15 | ಗುಂಬಳಗೊಡು ಸ್ಟೇಟ್ ಫಾರೆಸ್ಟ್ | ಡಿಟೋ |
| 16 | ಸಾವಂದುರ್ಗ ಡಿಟೋ | ಮಾಗಡಿ |
| 17 | ಪುಜನಿ, ಹುಲಕಡ್ಡಿ, ಮಾಕಳಿ–ಸ್ಟೇಟ್ ಫಾರೆಸ್ಟ್ | ದೊಡ್ಡಬಳ್ಳಾಪುರ |
| 18 | ಬಳ್ಳಿಗೆರೆ ಸಂದಲ್ ರಿಜರ್ವ್ | ನೆಲವಂಗಲ |
| 19 | ನಿಜಗಲ್ ಫಾರೆಸ್ಟ್ | ಡಿಟೋ |
| 20 | ಗೊಲ್ಲಹಳ್ಳಿ ಪ್ಲಾಂಟೇಷ್ಟ | ಹೊಸಕೋಟೆ |
| 21 | ಮಾದಪ್ಪನಹಳ್ಳಿ ಡಿಟೋ | ದೊಡ್ಡಬಳ್ಳಾಪುರ |
| 22 | ಗರಳಾಪುರ ಸಂದಲ್ ರಿಜರ್ವ್ | ಕಾನಕಾನಹಳ್ಳಿ |
| 23 | ಕೃಷ್ಣಾಪುರ ದೊಡ್ಡಿ ರೆವಿನ್ಯೂ ಪ್ಲಾಂಟೇಷ್ಟ | ಕ್ಯೋಸಪೇಟೆ |
| 24 | ಗಂಟಿಗಾನಹಳ್ಳಿ ಮತ್ತು ಜಕ್ಕೂರು ರೆವಿನ್ಯೂ ಪ್ಲಾಂಟೇಷ್ಟಗಳು | ಬೆಂಗಳೂರು |
| 25 | ಬನ್ನಿನಹಳ್ಳಿ ಮತ್ತು ಬೈರಕಟ್ಟೆಹಳ್ಳಿ ಡಿಟೋ | ನೆಲವಂಗಲ |

ವೈ. ಸೀತಾರಾಮಯ್ಯ,
ಡಿಸ್ಟ್ರಿಕ್ಟ ಫಾರೆಸ್ಟ್ ಆಫಿಸರ್.

## ನೋಟಿಸ್.

### ತುಮಕೂರು ಡಿಸ್ಟ್ರಿಕ್ಟ ಫಾರೆಸ್ಟ್ ಡಿಪಾರ್ಟ್‌ಮೆಂಟ್.

ತಾರೀಖು 26ನೇ ಡಿಸೆಂಬರ್ 1895ನೇ ಇಸವಿ.

1890ನೇ ಇಸವಿ ಫೆಬ್ರವರಿ 1ನೇ ತಾರೀಖಿನ ಮೈಸೂರ ಗೆಜೆಟ್ 2ನೇ ಭಾಗ 26ನೇ ಪುಟದಲ್ಲಿ ಪ್ರಾಯಿವ್ಡ್ ಮಾಡಿರುವ ಫಾರೆಸ್ಟ್ ಇನ್ಸ್ಪೆಕ್ಟರ್ ಜನರಲ್ ಸಾಹೆಬರವರ ನೋಟಿಫಿಕೇಷ್ಟ ಅನುಸರಿಸಿ ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,

ಈ ಕೆಳಗೆ ನಮೂದಿಸಿರುವ ತುಮಕೂರು ಡಿಸ್ಟ್ರಿಕ್ಟಿನ ಸ್ಟೇಟ್ ಫಾರೆಸ್ಟ್ಸ ಮತ್ತು ಪ್ಲಾಂಟೇಷ್ಟಗಳನ್ನ 1896ನೇ ಇಸವಿ ಜನವರಿ 1ನೇ ತಾರೀಖು ಲಾಗಾಯಿತು ಮೇ ಆಖೈರುವರಿಗೂ ಬಂದ್ ಮಾಡಲ್ಪಟ್ಟಿರುತ್ತೆ.

ಅಂಬುಗಾರರಿಗೂ ಷಿಕಾರಿಗಳಿಗ್ಗೂ ಬೇಟೆಗಾರರಿಗೂ ಸಹ ಲೈಸೆನ್ಸು ಕೊಡಲ್ಪಡುವದಿಲ್ಲಾ. ರೂಲ್ ಅತಿಕ್ರಮಿಸಿ ಪ್ರವೇಸಿಸುವವರನ್ನ ಕ್ರಮವಾಗಿ ಸಿಕ್ಷಿಸಲ್ಪಡುವದು.

| | ಫಾರೆಸ್ಟ್ ಯಾ ಪ್ಯಾಕ್ಟೇರ್ಷ ಹೆಸರು. | ತಾಲ್ಲೂಕು ಹೆಸರು. |
|---|---|---|
| 1. | ದೇವರಾಯದುರ್ಗ ಸ್ಟೇಟ್ ಫಾರೆಸ್ಟ್ | ತುಮಕೂರು ತಾಲ್ಲೂಕು |
| 2. | ಮದ್ದಗಿರಿ ಸ್ಟೇಟ್ ಫಾರೆಸ್ಟ್ಸು, ಕೊಳಿಕಲ್ ಬ್ಯಾಕು ಕೇರಿ .. | ಮದ್ದಗಿರಿ ಡಿಟೋ |
| 3. | ಹುಲಿಯೂರ್ ದುರ್ಗ ಸ್ಟೇಟ್ ಫಾರೆಸ್ಟ್, ಕಂಪ್ಲಾಪುರ ಬ್ಯಾಕು ಕೇರೀ | ಕುಣಿಗಲ್ ಡಿಟೋ |
| 4. | ಬುಕ್ಕಾಪಟ್ಣ ಕುಚಲದೊರೆ ಸ್ಟೇಟ್ ಫಾರೆಸ್ಟ್ .. | ಶಿರಾ ಚಿಕ್ಕನಾಯಿಕನಹಳ್ಳಿ ತಾಲ್ಲೂಕು ಮತ್ತು ಗುಬ್ಬೀ ತಾಲ್ಲೂಕು |
| 5. | ಕುದರೆಕಣವೆ ಸ್ಟೇಟ್ ಫಾರೆಸ್ಟ್ .. | ಹುಳಿಯಾರ ಸಬ್ ತಾಲ್ಲೂಕು |
| 6. | ಸೂಳೇಕೆರೆ ಪ್ಯಾಕ್ಟೇರ್ಷ .. | ಕೊರಟಗೆರೆ ಡಿಟೋ |
| 7. | ದಾಸರಹಳ್ಳಿ ಡಿಟೋ .. | ತುಮಕೂರು ತಾಲ್ಲೂಕು |
| 8. | ಗೊಲ್ಲಹಳ್ಳಿ ಮಲ್ಲಸಂದ್ರ ಡಿಟೋ .. | |
| 9. | ಲಿಂಗೇನಹಳ್ಳಿ ಡಿಟೋ .. | |
| 10. | ಬಳ್ಳಾಪುರ ಡಿಟೋ .. | |
| 11. | ಅಡಗೂರು ಡಿಟೋ .. | ಗುಬ್ಬೀ ತಾಲ್ಲೂಕು |
| 12. | ಗಂಟಿಗಾನಹಳ್ಳಿ ಡಿಟೋ .. | ಕೊರಟಗೆರೆ ಸಬ್ ತಾಲ್ಲೂಕು |

ಯಂ. ವೆಂಕಟನಾರಣಪ್ಪ,
ಅಸಿಸ್ಟೆಂಟ್ ಕ್ವಾರ್ಟರ್ ಮಾಸ್ಟರ್ ಜನರಲ್ ಆಫ್ ಫಾರೆಸ್ಟ್ಸ್.

---

## ತುಮಕೂರು ಡಿಸ್ಟ್ರಿಕ್ಟ್.

### ಇನ್ಸಿ ಹಾರ್ಡ್‌ನಾಮೆ.

1895ನೇ ಇಸವಿ ಡಿಸೆಂಬರ್ ತಾರೀಖು 12.

ಸ್ ೧೮೬೭ನೇ ಇಸವಿ ಏಪ್ರಿಲ್ 17ನೇ ಮುಕ್ತಂ 6ನೇ ನಂಬರ್ ಗವರ್ನಮೆಂಟ್ ನೋಟಿಫಿಕೇರ್ಷ 3ನೇ ರೂಲ್ ಪ್ರಕಾರ ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಕುಣಿಗಲ್ ತಾಲ್ಲೂಕು ಕುಣಿಗಲ್ ಟವನಿನಲ್ಲಿರುವ ಹೇರೂರ ಅಪ್ಪಂಣಯ್ಯನವರ ಜಮೀನಿನಲ್ಲಿ ಕೆಲವು ಕೂಲಿಗಳು 1890ನೇ ಆಕ್ಟೋಬರ್ 3ನೇ ತಾರೀಖಿನ ದಿವಸ ಮಂಣು ಅಗೆಯುತ್ತಿರುವಾಗ ಇದರಡಿ ಕಂಡ ನಿಕ್ಷೇಪಗಳು ಅಡಗಿದ್ದ ಬಂದು ಪತ್ತೆಯು ದೊರೆಯಿತು. ಸದರೀ ನಿಕ್ಷೇಪ ಯಾ ಆದರಲ್ಲಿ ನಂದು ಭಾಗಕ್ಕೆ ಹಕ್ಕು ದಾರರಾಗಿರುವ ಸಮಸ್ತ ಜನಗಳೂ ಖುದ್ದಾಗಿಯಾಗಲಿ ಅಥವಾ ವಕೀಲರ ಮೂಲಕವಾಗಿಯಾಗಲಿ ಬರುವ 1896ನೇ ಜೂ. 29ನೇ ತಾರೀಖಿನ ದಿವಿ 12 ಘಂಟೆಗೆ ಸರಿಯಾಗಿ ತುಮಕೂರು ಮೊಕ್ಕಾಂನಲ್ಲಿ ಜೆಪ್ಯುಟಿ ಕಮಿಷ್ಮನರವರ ರೂಬರು ಹಾಜರಾಗಿ ಅವರವರ ಹಕ್ಕನ್ನು ವೆವಸ್ಥೆ ಮಾಡಿಕೊಳ್ಳತಕ್ಕದ್ದು.

### ನಿಕ್ಷೇಪದ ತಪ್ಸೀಲ್.

| | | | |
|---|---|---|---|
| ಕಂಠೀರಾಯ ಹಣ | 24 | ಕಂಜು | 1 |
| ಭಂಗಾರದ ತಾಳಿಗಳು | 2 | ಕಂಚಿನ ಹಣತೆ | 1 |
| ಡಿಟೋ ಗುಂಡುಗಳು .. | 4 | ಕಂಖ .. | 1 |
| ಬೆಳ್ಳಿ ರೂಪಾಯಿ .. | 1 | ಸಣ್ಣ ಸಾಣೇಕಲ್ಲು .. | 1 |
| ಬೆಳ್ಳಿ ವುಂಗ್ರಗಳು ಚಿಕ್ಕವು .. | 2 | ಕಂಚಿನ ಗುಂಡು .. | 1 |

ಎಂ. ನಾರಾಯಣರಾವ್,
ಅಫಿಷಿಯಟಿಂಗ್ ಡೆಪ್ಯುಟಿ ಕಮ್ಮಿಷನರ್.

---

## ಮೈಸೂರ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟ್‌ನಲ್ಲಿ.

ಸ್ ೧೮೯೬ನೇ ಇಸವಿ ಅರ್ಜೀ ನಂಬರ್ 186.

ಮೃತಪಟ್ಟ ರಾಮಾಭಟ್ಟರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ದೇವರಭಟ್ಟರು, ಮೃತಪಟ್ಟ ಸದರೀ ರಾಮಾಭಟ್ಟರಿಗೆ ತಮ್ಮನ ಮಗ, ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಶ್ರೀರಾಂಪೇಟೆ ಸ್ಥಳದ ಸದರೀ ದೇವರಭಟ್ಟರು, ಸದರೀ ವಾಸಸ್ಥರಾಗಿ ಮೃತಪಟ್ಟ ರಾಮಾಭಟ್ಟರ ಜಿಂದಗಿ ಬಗ್ಯಾಗಿ ಬರತಕ್ಕ 400